ಪ್ರಮಾಣಪತ್ರದ ಆಧಾರದ ಮೇಲೆ ಅಮೆರಿಕದ ದೂತವಾಸ ಕಚೇರಿಗಳು ವಿದ್ಯಾರ್ಥಿಗಳ ಪಾಸ್‌ಪೋರ್ಟ್ ಮೇಲೆ 'ವೀಸಾ' ಸ್ಟಿಕ್ಕರ್ ಅಂಟಿಸುತ್ತವೆ. ಶೈಕ್ಷಣಿಕ ಅಗತ್ಯಕ್ಕೆ ತಕ್ಕಂತೆ ಈ ವೀಸಾದ ಸ್ವರೂಪ ಇರುತ್ತದೆ. ಅಂಗೀಕೃತ ವಿದ್ಯಾಸಂಸ್ಥೆಗಳಿಂದ ಪೂರ್ಣಪ್ರಮಾಣದ ಶಿಕ್ಷಣ ಪಡೆಯುವುದಾದರೆ ಅಂತಹ ವಿದ್ಯಾರ್ಥಿಗೆ I-20 (ವಲಸಿಗನಲ್ಲದ ವಿದ್ಯಾರ್ಥಿ – ಎಫ್ 1– ಅರ್ಹತೆ ಪತ್ರ) ಬೇಕು. ಅದರಿಂದ ಎಫ್–1 ವೀಸಾ ಸಿಗುತ್ತದೆ.

ಶೈಕ್ಷಣಿಕ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಯಾದರೆ DS-2019 (ವಿನಿಮಯ ಕಾರ್ಯಕ್ರಮದ ಪ್ರವಾಸಿ ಅರ್ಹತೆ ಪತ್ರ) ಬೇಕು. ಅದರಿಂದ ಜೆ–1 ವೀಸಾ ಸಿಗುತ್ತದೆ. ವಾರಕ್ಕೆ 18 ಗಂಟೆಗಳಿಗೂ ಹೆಚ್ಚು ಕಾಲ ಶಿಕ್ಷಣೇತರ ಅಥವಾ ವೃತ್ತಿ ಆಧಾರಿತ ತರಬೇತಿ ಪಡೆಯುವುದಾದರೆ I- 20 ಪತ್ರ ಬೇಕು. ಅದರಿಂದ ಎಂ–1 ವೀಸಾ ದೊರಕುತ್ತದೆ. ಶಿಕ್ಷಣದ ಅಗತ್ಯಕ್ಕೆ ತಕ್ಕಂತೆ ಅರ್ಹತೆ ಪತ್ರ (I-20 ಅಥವಾ DS-2019) ಪಡೆದ ಮೇಲೆ ವೀಸಾಕ್ಕಾಗಿ ಅಮೆರಿಕದ ದೂತವಾಸದ ಕದ ತಟ್ಟಬೇಕು. ಶೈಕ್ಷಣಿಕ ಕಾರ್ಯಕ್ರಮ ಶುರುವಾಗುವ ಗರಿಷ್ಠ 120 ದಿನಗಳ ಮುಂಚೆಯೇ ಈ ವೀಸಾ ವಿತರಿಸಲಾಗುತ್ತದೆ.

ಅಮೆರಿಕ ಒಂದು ಒಕ್ಕೂಟ ರಾಷ್ಟ್ರ. ಸ್ಥಳೀಯ ಸರ್ಕಾರಗಳಿಗೆ ಅಲ್ಲಿ ತುಂಬಾ ಬೆಲೆ. ರಾಷ್ಟ್ರಮಟ್ಟದ ಏಕರೂಪದ ಶಿಕ್ಷಣ ವ್ಯವಸ್ಥೆ ಅಲ್ಲಿಲ್ಲ. ರಾಜ್ಯದಿಂದ ರಾಜ್ಯಕ್ಕೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ತುಂಬಾ ಭಿನ್ನತೆ ಇದೆ. ಆಯಾ ರಾಜ್ಯದಲ್ಲಿ ಪ್ರತ್ಯೇಕ ಶೈಕ್ಷಣಿಕ ಮಾರ್ಗಸೂಚಿಯೇ ಇದೆ. ಆಯಾ ಆರ್ಥಿಕ ವರ್ಷದಲ್ಲಿ ಯಾವ ವಿಶ್ವವಿದ್ಯಾಲಯಕ್ಕೆ ಎಷ್ಟು ಅನುದಾನ ನೀಡಬೇಕು ಎಂಬುದನ್ನು ಆ ಪ್ರಾಂತ್ಯದ ಶಾಸನಸಭೆ ನಿರ್ಧರಿಸುತ್ತದೆ. ಆದರೆ, ನಮ್ಮಲ್ಲೀಗ ಉಲ್ಟಾ ವ್ಯವಸ್ಥೆ ಬರುತ್ತಿದೆ. ರಾಷ್ಟ್ರೀಯ ಏಕರೂಪ ಪಠ್ಯಕ್ರಮ ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಲಾಗುತ್ತಿದೆ.

ಅಮೆರಿಕದ ಕೊಲಂಬಿಯಾ, ಮೆಸ್ಸಾಚುಸೆಟ್ಸ್, ನ್ಯೂಯಾರ್ಕ್, ವಾಷಿಂಗ್ಟನ್ – ವಿದೇಶಿ ವಿದ್ಯಾರ್ಥಿಗಳ ನೆಚ್ಚಿನ ತಾಣಗಳಲ್ಲಿ ಮೊದಲ ಸ್ಥಾನದಲ್ಲಿವೆ. ಅಲ್ಲಿನ ದೊಡ್ಡ ದೊಡ್ಡ ಕ್ಯಾಂಪಸ್‌ಗಳಲ್ಲಿ ಓದುವ ಕನಸು ಹೊತ್ತವರನ್ನು ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಕೆನಡಾ, ಸಿಂಗಪುರ, ಆಸ್ಟ್ರೇಲಿಯಾ ಕಡೆಗೆ ತಿರುಗಿಸಿ ನಿಲ್ಲಿಸಿವೆ.

ಅಮೆರಿಕದ ಗ್ರಾಜ್ಯುವೇಟ್ ಮ್ಯಾನೇಜ್‌ಮೆಂಟ್ ಎಡ್ಮಿಶನ್ ಟೆಸ್ಟ್‌ಗೆ (ಜಿಎಂಎಟಿ) ಹೆಸರು ನೋಂದಣಿ ಮಾಡಿದವರಲ್ಲಿ ಹಲವು ಭಾರತೀಯ ವಿದ್ಯಾರ್ಥಿಗಳು ಈಗ ಪರೀಕ್ಷೆ ಬರೆಯುವುದೇ ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಅಶೋಕ್ ಅಗರವಾಲ್ ಅವರನ್ನೇ ಕೇಳಿ. ಅವರಿಗೆ ಕಳೆದ ನವೆಂಬರ್‌ವರೆಗೂ

## ಅವಕಾಶ ಬಾಚುತ್ತಿರುವ ಕೆನಡಾ

ಅಮೆರಿಕ ಹಾಗೂ ಇಂಗ್ಲೆಂಡ್‌ನಲ್ಲಿ ಉಂಟಾಗಿರುವ ರಾಜಕೀಯ ಸ್ಥಿತ್ಯಂತರದಿಂದ ಬೇರೆ ದೇಶಗಳತ್ತ ನೋಡುತ್ತಿರುವ ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಕೆನಡಾ ಕೈಬೀಸಿ ಕರೆಯುತ್ತಿದೆ. ಅದರಲ್ಲೂ ಭಾರತೀಯ ವಿದ್ಯಾರ್ಥಿಗಳಿಗೆ ಆ ದೇಶ ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದೆ.

2017ರಲ್ಲಿ ಮೂರು ಲಕ್ಷ ವಲಸಿಗರಿಗೆ ತನ್ನ ದೇಶದಲ್ಲಿ ಶಾಶ್ವತ ನೆಲೆ ಕಲ್ಪಿಸಲು ನಿರ್ಧರಿಸಿರುವ ಕೆನಡಾ, ಅದರಲ್ಲಿ ನಿರಾಶ್ರಿತರಿಗೆ ಮೀಸಲಿಟ್ಟ ಪ್ರಮಾಣವನ್ನು ಕಡಿತಗೊಳಿಸಿದೆ. ಉನ್ನತ ಅಧ್ಯಯನಕ್ಕಾಗಿ ತನ್ನಲ್ಲಿಗೆ ಬರುವ ಭಾರತೀಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಾಯಂ ರಹವಾಸಿ ಸ್ಥಾನ ನೀಡಲು ಅದು ಉತ್ಸುಕವಾಗಿದೆ. ಹೀಗಾಗಿ ಒಳ್ಳೆಯ ವೃತ್ತಿ ಸಿಕ್ಕರೆ ಕೈತುಂಬಾ ಆದಾಯ ಗಳಿಸುವ ಜತೆಗೆ ಅಲ್ಲಿಯೇ ನೆಲೆ ಕಂಡುಕೊಳ್ಳಬಹುದು ಎಂಬ ಕನಸು ಕಾಣುತ್ತಿದೆ ಏಷ್ಯಾದ ಯುವ ಸಮುದಾಯ.

ಉನ್ನತ ಅಧ್ಯಯನಕ್ಕಾಗಿ ಬಂದಿದ್ದ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಲ್ಲಿ ಕಳೆದ ವರ್ಷ 5,829 ಜನ ಇಲ್ಲಿಯೇ ಉದ್ಯೋಗ ಗಿಟ್ಟಿಸಿ, ಕಾಯಂ ನಿವಾಸಿಗಳಾಗಿದ್ದಾರೆ. ಅದರಲ್ಲಿ ಭಾರತೀಯರ ಸಂಖ್ಯೆಯೇ ಹೆಚ್ಚಿದೆ. ಲಕ್ಷಾಂತರ ರೂಪಾಯಿ ವ್ಯಯಿಸಿ ವಿದೇಶದಿಂದ ಪದವಿ ಪಡೆದುಕೊಂಡು ಹೋದರೂ ತವರಿನಲ್ಲಿ ಕೆಲಸ ಸಿಗುವುದು ಕಷ್ಟ. ಓದಿದ ಸ್ಥಳದಲ್ಲೇ ಸುಲಭವಾಗಿ ಕೆಲಸ ಸಿಗುವುದು ನಿಮಗೆ ಖುಷಿ ಕೊಡುವ ವಿಷಯವಲ್ಲವೆ ಎಂದು ಕೆನಡಾ ವಿಶ್ವವಿದ್ಯಾಲಯಗಳ ಒಕ್ಕೂಟದ ಪ್ರತಿನಿಧಿಗಳು ಶಿಕ್ಷಣಾರ್ಥಿಗಳಿಗೆ ಇನ್ನಷ್ಟು ಮತ್ತಷ್ಟು ಹುರುಪು ತುಂಬುತ್ತಾರೆ.

ವಿದ್ಯಾರ್ಥಿ ವೀಸಾದ ನಿಯಮಾವಳಿಯನ್ನು ಕೆನಡಾ ಮತ್ತಷ್ಟು ಸರಳೀಕರಿಸಿದೆ. ವ್ಯಾಸಂಗದ ಉದ್ದೇಶಕ್ಕೆ ಅತಿ ವೇಗದಲ್ಲಿ ವೀಸಾ ಮಂಜೂರು ಮಾಡುತ್ತಿದೆ. ಕೆನಡಾ ವಿಶ್ವವಿದ್ಯಾಲಯಗಳ ಒಕ್ಕೂಟ ದೇಶದ ಪ್ರತಿ ಮಹಾನಗರದಲ್ಲೂ ಶೈಕ್ಷಣಿಕ ಮೇಳ ನಡೆಸಿ ತನ್ನ ದೇಶದತ್ತ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. 2014ರಲ್ಲಿ ಕೆನಡಾ ತನ್ನ ಶೈಕ್ಷಣಿಕ ನೀತಿಯಲ್ಲಿ ಬದಲಾವಣೆ ಮಾಡಿಕೊಂಡ ಬಳಿಕ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿದೆ. ಈ ಸಲ ಅಮೆರಿಕದಲ್ಲಿ ಸೃಷ್ಟಿಯಾಗಿರುವ ಪ್ರತಿಕೂಲ ವಾತಾವರಣದ ಲಾಭ ಪಡೆಯಲು ಅದು ಈಗಾಗಲೇ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಅಧ್ಯಯನಕ್ಕೆ ಪೂರಕ ವಾತಾವರಣ ಕಲ್ಪಿಸುವಂತಹ ಸೊಗಸಾದ ಕ್ಯಾಂಪಸ್‌ಗಳು ಕೆನಡಾದಲ್ಲಿವೆ. ಅಮೆರಿಕ ಹಾಗೂ ಇಂಗ್ಲೆಂಡ್‌ಗೆ ಹೋಲಿಸಿದರೆ ಕಲಿಕೆ ಹಾಗೂ ಜೀವನ ವೆಚ್ಚವೂ ಕಡಿಮೆ ಇದೆ. ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಬಹು ಆಯ್ಕೆಗಳಿವೆ. ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷಾ ಮಾಧ್ಯಮದಲ್ಲಿ ಪಾಠ ಮಾಡಲಾಗುತ್ತದೆ. ಆದರೆ, ಸಂಶೋಧನಾ ಕ್ಷೇತ್ರಕ್ಕಿಂತ ಎಂಜಿನಿಯರಿಂಗ್ ವಿಭಾಗದಲ್ಲಿ ಅವಕಾಶಗಳು ಹೆಚ್ಚು. ಅದೊಂದೇ ಇಲ್ಲಿನ ಋಣಾತ್ಮಕ ಅಂಶ ಎಂದು ಅಂತರರಾಷ್ಟ್ರೀಯ ಶಿಕ್ಷಣ ತಜ್ಞರು ಹೇಳುತ್ತಾರೆ.

ಅಮೆರಿಕದ ಸದ್ಯದ ಪರಿಸ್ಥಿತಿಯ ಲಾಭವನ್ನು ಪಡೆಯಲು ಸಿಂಗಪುರ, ಆಸ್ಟ್ರೇಲಿಯಾ ದೇಶಗಳು ಸಹ ಹವಣಿಸುತ್ತಿವೆ. ಉಳಿದ ದೇಶಗಳಿಗೆ ಹೋಲಿಸಿದರೆ ಸಿಂಗಪುರದಲ್ಲಿ ಶಿಕ್ಷಣ ತುಸು ಅಗ್ಗ. ಆದರೆ, ಅಲ್ಲಿಯೂ ಸಂಶೋಧನಾ ಚಟುವಟಿಕೆಗಳಿಗೆ ಅವಕಾಶ ಕಡಿಮೆ ಎಂದು ಅವರು ವಿಶ್ಲೇಷಿಸುತ್ತಾರೆ.



